ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್-65ರಲ್ಲಿ ಆನ್‌ಲೈನ್ (Zoom App) ಮೂಲಕ ದಿನಾಂಕ: 11-03-2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

ವಾರ್ಡ್ ಸಂಖ್ಯೆ-65 ಕಾಡುಮಲ್ಲೇಶ್ವರ

ಸಮಯ ಬೆಳಿಗ್ಗೆ 11:00 ಘಂಟೆಗೆ

ದಿನಾಂಕ: 11-03-2022 ರಂದು ವಾರ್ಡ್ ಸಂಖ್ಯೆ:65ರ ಮಾರ್ಚ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಆನ್‌ಲೈನ್ (Zoom App) ಮೂಲಕ ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಆರೋಗ್ಯ ವೈದ್ಯಾಧಿಕಾರಿ (ಮಲ್ಲೇಶ್ವರಂ) ರವರಾದ ಡಾ// ಲಾವಣ್ಯ ರವರು ಸಭೆಯಲ್ಲಿ ಹಾಜರಿದ್ದು, ಕೋವಿಡ್-19 ವ್ಯಾಕ್ಸಿನೇಶನ್ ಬಗ್ಗೆ ಮನೆ ಮನೆಗೆ ವ್ಯಾಕ್ಸಿನೇಶನ್ ನೀಡುತ್ತಿದ್ದು, ಕೋವಿಡ್-19ರ ನಿಯಮಗಳನ್ನು ಪಾಲಿಸಬೇಕೆಂದು ಹಾಗೂ ವಿದೇಶಿ ಪ್ರಯಾಣಿಕರ ಮಾಹಿತಿಯನ್ನು ಕಲೆಹಾಕುತ್ತಿರುವುದನ್ನು ಸಭೆಗೆ ತಿಳಿಸಿರುತ್ತಾರೆ. ಮತ್ತು ಸೋಂಕು ಕಡಿಮೆಯಾಗುತ್ತಿದೆ ಎಂದು ತಿಳಿಸಿದರು.
- ಆರೋಗ್ಯ ಇಲಾಖೆಯ ಶ್ರೀ ಅನಿಲ್, ಕಿರಿಯ ಆರೋಗ್ಯ ಪರಿವೀಕ್ಷರು ರವರು ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರು ಕೇಳಿದ್ದ 8ನೇ ಮತ್ತು 11ನೇ ಅಡ್ಡರಸ್ತೆಯಲ್ಲಿರುವ ಕಸವನ್ನು ತೆಗೆಯುವ ಬಗ್ಗೆ ಶ್ರೀ ಅನಿಲ್ ರವರು ಉತ್ತರಿಸಿರುತ್ತಾರೆ, ಹಾಗೂ 2ನೇ ಪಾಳಿಯಲ್ಲಿ ಸಂಪಿಗೆ ರಸ್ತೆಯಲ್ಲಿ ಕಸವನ್ನು ವಿಲೇವಾರಿ ಮಾಡುವಂತೆ ತಿಳಿಸಿರುತ್ತಾರೆ. ಮತ್ತು ಮಾರ್ಷಲ್‌ಗಳಿಗೆ ಕಸವನ್ನು ಬಿಸಾಡುವ ಬಗ್ಗೆ ನಿಗವಹಿಸುವಂತೆ ಸಭೆಗೆ ಹೇಳಿರುತ್ತಾರೆ.
- ಆರೋಗ್ಯ ಇಲಾಖೆಯ ಶ್ರೀಮತಿ ರೇಣುಕಾ ಹಿರಿಯ ಆರೋಗ್ಯ ಪರಿವೀಕ್ಷರು ರವರು ಸಭೆಯಲ್ಲಿ ಹಾಜರಿದ್ದು, ರಸ್ತೆ ಬದಿಗಳಲ್ಲಿ ಪೇಪರ್ ಕಾಫಿ ಲೋಟಗಳನ್ನು ಎಸದಿರುವ ಬಗ್ಗೆ ದೂರು ನೀಡಿದ್ದು, ಪರಿವೀಕ್ಷಿಸಿ ಇದರ ಬಗ್ಗೆ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

- ಬೆಸ್ಕಾಂ ಇಲಾಖೆಯವರಾದ ಶ್ರೀ ಮಂಜುನಾಥ್ ರವರು ಸಭೆಯಲ್ಲಿ ಹಾಜರಿದ್ದು, ಯುಜಿ ಕೇಬಲ್‌ಗಳು 8 ದವಸಗಳೊಳಗೆ ಮುಗಿಸಿಕೊಡುವುದಾಗಿ ಸಭೆಗೆ ತಿಳಿಸಿರುತ್ತಾರೆ.

- ಅರಣ್ಯ ಇಲಾಖೆಯ ಶ್ರೀ ಮೂರ್ತಿ ರವರು ಹಾಜರಿದ್ದು, 8ನೇ ಮುಖ್ಯರಸ್ತೆ ಮತ್ತು 4ನೇ ಮತ್ತು 6ನೇ ಅಡ್ಡರಸ್ತೆಯಲ್ಲಿರುವ ಮರದ ರಂಬೆಗಳು ಮನೆಗಳ ಅಂಗಳದೊಳಗೆ ಬಂದಿರುವುದರಿಂದ ತುರ್ತಾಗಿ ತೆರವುಗೊಳಿಸಲು ಕ್ರಮಕೈಗೊಳ್ಳುವುದಾಗಿ ಶ್ರೀ ಮೂರ್ತಿ ರವರು ಸಭೆಗೆ ತಿಳಿಸಿರುತ್ತಾರೆ.

Scanned with CamScanner

- ಟೆಂಡರ್ ಶ್ಯೂರ್ ಇಲಾಖೆಯ ವತಿಯಿಂದ ಹಾಜರಿದ್ದ ಎಇಇ ನಾಗರಾಜು ರವರು ಮಾರ್ಗೋಸಾ ರಸ್ತೆಗಳಲ್ಲಿ ಹಂಪ್‌ಗಳಿಗೆ ಬಣ್ಣ ಬಳಿಯಲು ಸಾರ್ವಜನಿಕರು ಸಂಬಂಧಪಟ್ಟವರಿಗೆ ಕೇಳಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿರುತ್ತಾರೆ.

- ಅಳವಡಿಸಿರುವ ಬ್ಯಾನರ್‌ಗಳನ್ನು ತೆಗೆಯಬೇಕೆಂದು ಹಾಗೂ ಜೋತು ಬಿದ್ದಿರುವ ಕೇಬಲ್‌ಗಳನ್ನು ತೆರವುಗೊಳಿಸುವುದಾಗಿ ಶ್ರೀ ನರಸಿಂಹಯ್ಯ ರವರು ಸಭೆಗೆ ತಿಳಿಸಿರುತ್ತಾರೆ.

- ಶ್ರೀ ರವೀಂದ್ರ ರವರು ನಡೆಯುತ್ತಿರುವ ಕಾಮಗಾರಿಗಳ ನಾಮಫಲಕಗಳನ್ನು ಅಳವಡಿಸಲು ಕೋರಿರುತ್ತಾರೆ.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ,

13/3/22

ಸಹಾಯಕ ಅಭಿಯಂತರರು, ವಾರ್ಡ್-65

ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner

ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಕಾಡುಮಲ್ಲೇಶ್ವರ ವಾರ್ಡ್-65ರಲ್ಲಿ ಆನ್‌ಲೈನ್ (Zoom App) ಮೂಲಕ ದಿನಾಂಕ: 07-01-2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ

ಸಭಾ ನಡವಳಿಗಳು.

ವಾರ್ಡ್ ಸಂಖ್ಯೆ-65 ಕಾಡುಮಲ್ಲೇಶ್ವರ

ಸಮಯ ಬೆಳಿಗ್ಗೆ 11:00 ಘಂಟೆಗೆ

ದಿನಾಂಕ: 07-01-2022 ರಂದು ವಾರ್ಡ್ ಸಂಖ್ಯೆ:65ರ ಜನವರಿ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಆನ್‌ಲೈನ್ (Zoom App) ಮೂಲಕ ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 65ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಆರೋಗ್ಯ ವೈದ್ಯಾಧಿಕಾರಿ (ಮಲ್ಲೇಶ್ವರಂ) ರವರಾದ ಡಾ// ಲಾವಣ್ಯ ರವರು ಸಭೆಯಲ್ಲಿ ಹಾಜರಿದ್ದು, ಕೋವಿಡ್-19 ವ್ಯಾಕ್ಸಿನೇಶನ್ ಬಗ್ಗೆ ಮನೆ ಮನೆಗೆ ವ್ಯಾಕ್ಸಿನೇಶನ್ ನೀಡುತ್ತಿದ್ದು, ಕೋವಿಡ್-19ರ ನಿಯಮಗಳನ್ನು ಪಾಲಿಸಬೇಕೆಂದು ಹಾಗೂ ವಿದೇಶಿ ಪ್ರಯಾಣಿಕರ ಮಾಹಿತಿಯನ್ನು ಕಲೆಹಾಕುತ್ತಿರುವುದನ್ನು ಸಭೆಗೆ ತಿಳಿಸಿರುತ್ತಾರೆ.
- ಎಸ್.ಡಬ್ಲ್ಯೂಡಿ ಇಲಾಖೆಯ ಸಹಾಯಕ ಅಭಿಯಂತರರಾದ ಶ್ರೀಮತಿ ಇಂದ್ರಾಣಿ ರವರು ಸಭೆಯಲ್ಲಿ ಹಾಜರಿದ್ದು, ಕಛೇರಿಯ ಕಾಮಗಾರಿಗಳ ಬಗ್ಗೆ ವಿರಣೆಯನ್ನು ನೀಡಿರುತ್ತಾರೆ.
- ಆರೋಗ್ಯ ಇಲಾಖೆಯ ಶ್ರೀಮತಿ ರೇಖಾ ರವರು ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರು ಕೇಳಿದ್ದ ಕಸ ವಿಂಗಡಣೆ ಮಾಡಿ ಹಸಿ ಮತ್ತು ಒಣ ಕಸವನ್ನು ವಾರದ ಯಾವ ದಿನಗಳಲ್ಲಿ ತೆಗೆಯುವುದಾಗಿ ಕೇಳಿರುತ್ತಾರೆ.
- ಸಂಚಾರಿ ಪೋಲೀಸ್ ಇಲಾಖೆಯಿಂದ ಸಂಚಾರಿ ಇನ್ಸ್‌ಪೆಕ್ಟರ್ ರವರು ಸಭೆಯಲ್ಲಿ ಹಾಜರಿದ್ದು, ರಸ್ತೆಯ ಎರಡು ಬದಿಗಳಲ್ಲಿ ನಿಲ್ಲಿಸಿರುವ ಗಾಡಿಗಳಲ್ಲಿಂದ 9ನೇ ಅಡ್ಡರಸ್ತೆಯಲ್ಲಿ 5&6ನೇ ಮುಖ್ಯರಸ್ತೆಗಳ ಮಧ್ಯೆ ನಿಲ್ಲಿರುವ ವಾಹನಗಳಿಂದ ಪಾದಚಾರಿ ಮಾರ್ಗಗಳಲ್ಲಿ ಸಂಚಾರಿಸಲು ಸಾಧ್ಯವಿರುವುದಿಲ್ಲ. ಹಾಗೂ 6ನೇ ಅಡ್ಡರಸ್ತೆ ಎಸ್‌ಎಸ್‌ಎಲ್‌ಸಿ ಬೋರ್ಡ್ ಮುಂಭಾಗ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ.

Scanned with CamScanner

- ಬೆಸ್ಕಾಂ ಇಲಾಖೆಯುವರಾದ ಶ್ರೀ ಮಂಜುನಾಥ್ ರವರು ಸಭೆಯಲ್ಲಿ ಹಾಜರಿದ್ದು, ಯುಜಿ ಕೇಬಲ್‌ಗಳು 15 ದವಸಗಳೊಳಗೆ ಮುಗಿಸಿಕೊಡುವುದಾಗಿ ಸಭೆಗೆ ತಿಳಿಸಿರುತ್ತಾರೆ.

- ಅರಣ್ಯ ಇಲಾಖೆಯ ಶ್ರೀ ಮೂರ್ತಿ ರವರು ಹಾಜರಿದ್ದು, ಬೀದಿದೀಪಗಳಿಗೆ ತಡೆಹೊಡ್ಡಿರುವ ಮರದ ರೆಂಬೆಗಳನ್ನು ತ್ವರಿತವಾಗಿ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

- ಟೆಂಡರ್ ಶ್ಯೂರ್ ಇಲಾಖೆಯ ವತಿಯಿಂದ ಹಾಜರಿದ್ದ ಎಇಇ ನಾಗರಾಜು ರವರು ಮಾರ್ಗೋಸಾ ರಸ್ತೆಗೆ ಮಾರ್ಕಿಂಗ್, ಜೀಬ್ರಾ ಕ್ರಾಸಿಂಗ್, ಸ್ಪೀಟ್ ಬ್ರೇಕ್ ಅಳವಡಿಸಲು ಈ ತಿಂಗಳ ಒಳಗಾಗಿ ಕೈಗೊಳ್ಳಲು ಹಾಗೂ 2 ವರ್ಷ ವ್ಯಾರಂಟಿ ಅವಧಿ ಇರುವುದಾಗಿ ಹಾಗೂ ಮಳೆಯಿಂದ ಕುಸಿದಿರುವ ಪಾದಚಾರಿ ಮಾರ್ಗದಲ್ಲಿನ ಟೈಲ್ಸ್‌ಗಳನ್ನು ಸರಿಪಡಿಸುವುದಾಗಿ ಸಭೆಯಲ್ಲಿ ತಿಳಿಸಲಾಯಿತು.

- ಬೀದಿದೀಪ ಇಲಾಖೆಯಿಂದ ಶ್ರೀ ವಿನಯ್‌ಕುಮಾರ್ ಹಾಜರಿದ್ದು 15ನೇ ಅಡ್ಡರಸ್ತೆಯಿಂದ ಮಾರುತಿ ಶೋರೋಂ ವರೆಗೂ, 4ನೇ ಮುಖ್ಯರಸ್ತೆ 9ನೇ ಅಡ್ಡರಸ್ತೆಗಳಲ್ಲಿ ಬೀದಿದೀಪಗಳನ್ನು ಅಳವಡಿಸಲು ಸಭೆಯಲ್ಲಿ ತಿಳಿಸಲಾಯಿತು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಕಾರ್ಯದರ್ಶಿ,**

ಸಹಾಯಕ ಅಭಿಯಂತರರು, ವಾರ್ಡ್-65
ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ

Scanned with CamScanner